ಸಂಪುಟ: ೩ ಸಂಚಿಕೆ: ೧ ಪುಟ: ೪ ಜೂನ್ ೨೦೧೯

* ಆಂತರಿಕ ಪ್ರಸರಣಕ್ಕೆ ಮಾತ್ರ

ಅರಿವು ಶಾಲೆಯ ಮಾಸಪತ್ರಿಕೆ

# ಅಂಗಳ

ಮಾಹಿತಿ, ಜ್ಞಾನ, ಸೃಜನಶೀಲತೆಗೊಂದು ವೇದಿಕೆ

ಸಂಪಾದಕರು: ಡಾ.ಎಂ.ಸಿ.ಮನೋಹರ ಸಂಚಿಕೆ ಸಂಪಾದಕರು: ಸವಿತ ಬಿ.

www.arivu.org | e-mail: info@arivu.org ೯೪೮೦೨೨ ೭೭೮೭೨

## ಪುಟ್ಟ ಹೆಜ್ಜೆಯ ಆಗಮನ, ದಿಟ್ಟ ಹೆಜ್ಜೆಯ ನಿರ್ಗಮನ



ಅರಿವು ಶಾಲೆಯ ದಶಕದ ಸಾರ್ಥಕ ಪಯಣ

ಯಶಸ್ವಿಯಾಗಿ ಮುಖ್ಯವಾಹಿನಿ ಸೇರಿದ ಮೊದಲ ತಂಡ

ಈ ವರ್ಷ (೨೦೧೯) 'ಅರಿವು' ಬಳಗದ ಸಂಭ್ರಮಕ್ಕೆ ಎರಡು ಕಾರಣಗಳು. ಮೊದಲ ಕಾರಣ, 'ಅರಿವು' ಹತ್ತು ವರ್ಷ ಮುಗಿಸಿದ್ದು. ಎರಡನೆಯ ಕಾರಣ, ಶಾಲೆಯ ಮೊದಲ ಬ್ಯಾಚ್‌ನ ಮಕ್ಕಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಯಶಸ್ವಿಯಾದದ್ದು.

ಕಳೆದ ಏಪ್ರಿಲ್ ತಿಂಗಳ ಮೊದಲ ವಾರ ಮೊದಲ ಬ್ಯಾಚ್‌ನ ಹತ್ತನೇ ತರಗತಿಯ ಮಕ್ಕಳಿಗೆ ಆತ್ಮೀಯ ಬೀಳ್ಕೊಡುಗೆ ಸಮಾರಂಭ ಏರ್ಪಾಡಾಗಿತ್ತು. ಸೀರೆ, ಆಭರಣ ತೊಟ್ಟು, ಸಿಂಗಾರಗೊಂಡು ನಸುನಗುತ್ತಿದ್ದ ಹುಡುಗಿಯರೂ, ಬಣ್ಣ ಬಣ್ಣದ ಅಂಗಿ ತೊಟ್ಟು ನಿರಾಳವಾಗಿ ಕಾಲೇಜು ಕನಸು ಕಾಣುತ್ತಿದ್ದ ಹುಡುಗರೂ, ಸಮಾರಂಭದ ಸಿದ್ಧತೆಯಲ್ಲಿದ್ದ ಆಡಳಿತ ಮಂಡಳಿಯವರೂ, ಸಡಗರದ ಮಾತುಗಳಲ್ಲಿ ತೊಡಗಿದ್ದ ಪೋಷಕರೂ ಮತ್ತು ಮೌನದಲ್ಲಿದ್ದ ಶಿಕ್ಷಕರೂ ಒಂದೆಡೆ ಸೇರಿದ್ದೆವು. ಸಮಾರಂಭದ ಮೊದಲ ಭಾಗವಾಗಿ ಹಿರಿಯರಿಂದ ವೃತ್ತಿ ಮಾರ್ಗದರ್ಶನದ ಮಾಹಿತಿ ಮತ್ತು ಚರ್ಚೆ ನಡೆಯಿತು. ಪದವಿಪೂರ್ವ ಹಂತದಲ್ಲಿ ಮಕ್ಕಳು ಆಯ್ಕೆ ಮಾಡಿಕೊಳ್ಳಬಹುದಾದ ವಿಷಯಗಳು, ಅವುಗಳ ವ್ಯಾಪ್ತಿಯ ಬಗ್ಗೆ ಕಿರುಪರಿಚಯ ಮಾಡಲಾಯಿತು. ನಮ್ಮ ಸುತ್ತಮುತ್ತಲೇ ಪರಿಚಯವಿರುವ ಸಾಧಕರ ವಿದ್ಯಾಭ್ಯಾಸ–ಕಾಯಕಗಳ ಅವಲೋಕನವೂ ನಡೆಯಿತು. ನಂತರ ಮಕ್ಕಳು, ಪೋಷಕರು, ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು, ಹಿತೈಷಿಗಳು ಹತ್ತು ವರ್ಷಗಳ ಅನುಭವ ಹಂಚಿಕೊಂಡರು. ಸಿಹಿಯೂಟದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ಒಡನಾಟದ ನೆನಪಿನ ಓಟ....**

'ಅರಿವು' ಎಂಬ ಕನ್ನಡ ಮಾಧ್ಯಮದ ಪುಟ್ಟ ಪ್ರಾಯೋಗಿಕ ಶಾಲೆ ತೆರೆದಾಗ ಬಂದ ಈ ಮಕ್ಕಳು, ಇಂದು ಯುವಜನರಾಗಿ ಹೊರ ಹೊರಟಿದ್ದು ಸಂತಸದ ವಿಚಾರ. ಶಾಲೆಗೆ ಮೊದಲು ಬಂದ ಈ ಮಕ್ಕಳು ಹೆಚ್ಚಿನ ಪ್ರೀತಿ, ಸ್ವಾತಂತ್ರ್ಯ ಪಡೆದರು. ಅಂತೆಯೆ, ಹೊಸ ಜನ– ಹೊಸ ವಿಚಾರಗಳಿಗೆ ತೆರೆದುಕೊಂಡರು. ಕೆಲವು ವಿಷಯಗಳಲ್ಲಿ ವಿಪರೀತ ತೊಂದರೆಗೂ ಒಳಗಾದರು ಎಂಬುದು ಸತ್ಯ.

ಪಕ್ಕದಲ್ಲೇ ಇರುವ ರಾಘವೇಂದ್ರ ಅವರ ತೋಟದಲ್ಲಿ ಶಾಲೆ ಆರಂಭವಾದ ಮೊದಲಿಗರಾಗಿ ಪ್ರವೇಶ ಪಡೆದ ಆಗಿನ ಪುಟ್ಟ ಮಕ್ಕಳ ಚಿತ್ರಣ ಇನ್ನೂ ಮಾಸಿಲ್ಲ. ಅವರಾಡಿದ ತೊದಲು ಮತುಗಳು, ಹಾಡು, ನಾಟಕ, ನಡಿಗೆ, ಉಡುಗೆ–ತೊಡುಗೆ, ಆಟ–ಪಾಠಗಳು, ಮುನಿಸು–ಜಗಳ, ಗೆಳೆತನ... ಹೀಗೆ ಎಲ್ಲವೂ ಅಚ್ಚಳಿಯದೆ ಮನಸ್ಸಿನಲ್ಲಿ ದಾಖಲಾಗಿವೆ.

ಯಾವುದೇ ಸಿದ್ಧ ಮಾದರಿ ಮತ್ತು ಹೋಲಿಕೆಗಳಿಗೆ ಒಳಗಾಗದೆ, ತಮ್ಮದೇ ರೀತಿಯಲ್ಲಿ ರೂಪುಗೊಂಡ ತಂಡವಿದು. ಸ್ವಂತ ಶಾಲಾ ಕಟ್ಟಡವಿಲ್ಲದೆ ತಾತ್ಕಾಲಿಕವಾಗಿ ಕೆಲವರ ಮನೆ, ಬಯಲುಗಳಲ್ಲಿ ಕುಳಿತು ಗಾಳಿ, ಬೆಳಕು, ಮಳೆ, ಚಳಿಗೆ ತೆರೆದುಕೊಂಡವರು. ಅಬ್ಬಾ!, ಸುಮಾರು ಹತ್ತು ವರ್ಷಗಳಲ್ಲಿ ಏನೆಲ್ಲ ಅನುಭವಿಸಿದೆವು...?!

ಈ ಕಾರಣದಿಂದಲೋ ಏನೋ ಈ ಮಕ್ಕಳು ಶಿಕ್ಷಕರೊಂದಿಗೆ ಬಹಳ ಆತ್ಮೀಯತೆ ತೋರುತ್ತಿದ್ದರು. ವಿವಿಧ ಸಂದರ್ಭಗಳಲ್ಲಿ ತಮ್ಮ ಗೊಂದಲ, ಕಷ್ಟ, ಅನಿಸಿಕೆ, ತಮಾಷೆ ಪ್ರಸಂಗಗಳನ್ನೂ ಹಂಚಿಕೊಂಡು ಮಕ್ಕಳ ಬಗ್ಗೆ ಹೆಚ್ಚು ಅರಿಯಲು ಅನುವು ಮಾಡಿಕೊಟ್ಟರು. ಅವರೊಂದಿಗೆ ನಾವೂ ಬೆಳೆದೆವು.

ಕಡೆಗೆ ಎಸ್‌ಎಸ್‌ಎಲ್‌ಸಿ ಎಂಬ ಪಬ್ಲಿಕ್ ಪರೀಕ್ಷೆ ತಯಾರಿಯ ಸವಾಲು ಶುರುವಾದಾಗ ನಾವೆಲ್ಲ ಅನುಭವಿಸಿದ ಒತ್ತಡ ಅಪಾರ. ಒತ್ತಡವಿಲ್ಲದ ಮತ್ತು ಸಂತಸದ ಕಲಿಕೆಯ ಹಾದಿಯಿಂದ, ಒತ್ತಡದ ಹಾಗೂ ಶ್ರಮದಾಯಕವಾದ ಕಲಿಕೆಗೆ ಹೊರಳಿಕೊಂಡಿದ್ದೆವು. ಇತರ ಶಾಲಾ ಮಕ್ಕಳ ಪಾಠ–ಪ್ರವಚನಗಳ ಅಭ್ಯಾಸದ ಒತ್ತಡದ ಗಾಳಿ ನಮಗೂ ಬಡಿಯಿತು. ಶಿಕ್ಷಕರಾದ ನಾವು ಪರೀಕ್ಷೆ ಬರೆಯುವ ಒಂದು ಕೆಲಸದಿಂದ ಮಾತ್ರ ಮುಕ್ತಿ ಪಡೆದಿದ್ದೆವು. ಆದರೆ, ಮಕ್ಕಳು ಇಷ್ಟೆಲ್ಲ ಶ್ರಮದ ಜತೆ ಪರೀಕ್ಷೆ ಬರೆಯುವ ಜವಾಬ್ದಾರಿ ಯನ್ನೂ ಹೊಂದಿದ್ದರು.

ಶೈಕ್ಷಣಿಕ ವರ್ಷದ ಮೊದಲಾರ್ಧದಲ್ಲಿ ಎಸ್‌ಎಸ್‌ಎಲ್‌ಸಿ ಮಕ್ಕಳು ಎಂದಿನಂತೆ ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಭಾಗವಹಿಸಿ, 'ಚಿತ್ರಪಟ ರಾಮಾಯಣ' ನಾಟಕದ ಎರಡು ಪ್ರದರ್ಶನಗಳನ್ನೂ ಯಶಸ್ವಿಯಾಗಿ ನಿಭಾಯಿಸಿದರು. ಕೆಲವರು 'ಪಠ್ಯ ಕಲಿಕಾ ಪ್ರದರ್ಶನ'ದಲ್ಲೂ ಭಾಗವಹಿಸಿದರು. 'ಅರಿವು ಹಬ್ಬ'ದಲ್ಲಿ ತಾವೇ ನಿಂತು ಬಂದವರ ಊಟೋಪಚಾರ ನೋಡಿಕೊಂಡರು. ತಮ್ಮ ಜವಾಬ್ದಾರಿ ನಿರ್ವಹಣೆಯಿಂದ ಪ್ರಶಂಸೆಗೂ ಒಳಪಟ್ಟರು.

ಇವೆಲ್ಲವುಗಳ ಜತೆ ಓದು ಮತ್ತು ವಿಶೇಷ ತರಗತಿಗಳಿಗಾಗಿ ಯಾವುದೇ ಸಮಯದಲ್ಲಿ ಕರೆದರೂ ನಿಷ್ಠೆಯಿಂದ ಬಂದು ಕಲಿತರು.

ಈ ಮಕ್ಕಳ ಫಲಿತಾಂಶ ಶಾಲೆಯ ಭವಿಷ್ಯ ಮತ್ತು ಬಹಳಷ್ಟು ಜನರ ಅನುಮಾನದ ಪ್ರಶ್ನೆಗಳಿಗೆ ಉತ್ತರ ಎಂಬುದು ನಮಗೆಲ್ಲ ತಿಳಿದಿತ್ತು. ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದವರು, ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚು ಒತ್ತು ನೀಡಿ ಕಲಿತವರು ಇಂಗ್ಲಿಷ್ ಮಾಧ್ಯಮದಲ್ಲಿ ಪಬ್ಲಿಕ್ ಪರೀಕ್ಷೆಯನ್ನು ಹೇಗೆ

ಪುಟ ೩ಕ್ಕೆ

ರೇಖಾಚಿತ್ರಗಳು: ಶಾಜಿ

# ಗೋಧಿ ಹಿಟ್ಟು, ಮೈದಾ, ರವೆ ತಯಾರಿ ನೋಡಿದೆವು





ಗೋಧಿಹಿಟ್ಟು ತಯಾರಿಸುವುದು ತುಂಬಾ ಸುಲಭವೆಂದು ತಿಳಿದುಕೊಂಡಿದ್ದೆವು. ಆದರೆ, ನಮ್ಮ ಶಾಲೆಯಿಂದ 'ಸುರಕ್ಷ ಫ್ಲೋರ್ ಮಿಲ್'ಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ನಮಗೆ ಪ್ರವೀಣ್ ಅಣ್ಣ ಗೋಧಿಹಿಟ್ಟು ತಯಾರಿಸುವುದು ಹೇಗೆ? ಅದರಿಂದ ಮೈದಾ ತೆಗೆಯುವುದು ಹೇಗೆ? ರವೆ ತೆಗೆಯುವುದು ಹೇಗೆ ಎಂಬುದನ್ನು ಮೊದಲು ಪರಿಚಯ ಮಾಡಿಕೊಟ್ಟರು. ಗೋಧಿಯನ್ನು ಒಂದು ಗೋಡೌನ್‌ನಲ್ಲಿ ಸಂಗ್ರಹ ಮಾಡಿದ್ದರು. ಅಲ್ಲಿಗೆ ನಮ್ಮನ್ನು ಕರೆದುಕೊಂಡು ಹೋದರು. ಪಂಜಾಬ್ ಮತ್ತು ಉತ್ತರಪ್ರದೇಶ ರಾಜ್ಯಗಳಿಂದ ಗೋಧಿಯನ್ನು ತರಿಸಿಕೊಳ್ಳುತ್ತೇವೆ ಎಂದು ತಿಳಿಸಿದರು. ಆನಂತರ ಗೋಧಿಯನ್ನು ಸ್ವಚ್ಛ ಮಾಡುವ, ಗೋಧಿಹಿಟ್ಟನ್ನು ತಯಾರಿಸುವ ಯಂತ್ರಗಳನ್ನು ತೋರಿಸಿದರು. ಆದರೆ, ಯಾರನ್ನೂ ಹತ್ತಿರ ಬಿಡಲಿಲ್ಲ. ಏಕೆಂದರೆ, ಆ ಯಂತ್ರ ತುಂಬಾ ಬಿಸಿಯಾಗಿತ್ತು.

ಗೋಧಿಹಿಟ್ಟನ್ನು ಮಾಡುವ ಮೊದಲು ಗೋಧಿಯನ್ನು ಹೇಗೆ ತೊಳೆಯುತ್ತಾರೆ ಎಂದು ತಿಳಿಸಿದರು. ಗೋದಿಹಿಟ್ಟನ್ನು ಜರಡಿ ಮಾಡುವ ಯಂತ್ರವನ್ನು ತೋರಿಸಿದರು. ಜರಡಿ ಮಾಡುವಾಗ ಸಿಗುವ ಕಲ್ಲುಗಳನ್ನು ತೋರಿಸಿದರು. ನಂತರ ನಮ್ಮನ್ನು ಲ್ಯಾಬ್‌ಗೆ ಕರೆದುಕೊಂಡು ಹೋಗಿ ಗೋಧಿಹಿಟ್ಟಿನಿಂದ ಮಾಡಿದ ಚಪಾತಿಯನ್ನು ತಿನ್ನಲು ಕೊಟ್ಟರು. ಅದು ತುಂಬಾ ರುಚಿಯಾಗಿತ್ತು. ಗೋಧಿಹಿಟ್ಟನ್ನು ಸ್ವಚ್ಛ ಮಾಡುವಾಗ ಬೂಸ ಸಿಗುತ್ತದೆ. ಅದನ್ನು ಪ್ಯಾಕ್ ಮಾಡುತ್ತಿದ್ದರು. ಅದು ದನಗಳಿಗೆ ಆಹಾರ ಎಂದು ಹೇಳಿದರು.





ಗೋಧಿಹಿಟ್ಟನ್ನು ಹೇಗೆ ಪ್ಯಾಕ್ ಮಾಡುತ್ತಾರೆ ಎಂದು ತೋರಿಸಿದರು. ಈ ಮಿಲ್‌ನವರು ತಯಾರಿಸಿದ ಮೈದಾ ಹಿಟ್ಟನ್ನು ಒಂದು ಬೇಕರಿಗೆ ಕೊಡುತ್ತಾರೆ. ಬೇಕರಿಯವರು ಮೈದಾದಿಂದ ತಯಾರಿಸಿದ ಬನ್, ಕೇಕ್ ಅನ್ನು ಮಿಲ್‌ನವರಿಗೆ ಕೊಟ್ಟಿದ್ದರು. ಆ ಬನ್, ಕೇಕ್ ಅನ್ನು ಮಿಲ್‌ನವರು ನಮಗೆ ಕೊಟ್ಟರು. ನಾವು ಅದನ್ನು ತಿಂದು ಶಾಲೆಗೆ ಹಿಂದಿರುಗಿದೆವು. ಅಲ್ಲದೆ, ಅವರು ಎಲ್ಲ ಮಕ್ಕಳಿಗೂ ಅರ್ಧ ಕೆ.ಜಿ. ಗೋಧಿಹಿಟ್ಟನ್ನು ಕೊಟ್ಟರು.

। ಧವಳಚಂದ್ರ, ಪರಾಂಕುಶ್, ೮ನೇ ತರಗತಿ

## ಸಂಪಾದಕೀಯ

ಆತ್ಮೀಯ ಓದುಗರೆ,

'ಅಂಗಳ' ಪತ್ರಿಕೆ ಮೂರನೇ ವರ್ಷಕ್ಕೆ ಕಾಲಿಡುತ್ತಿದ್ದು, ಈ ವರ್ಷದ ಮೊದಲ ಸಂಚಿಕೆಯ ಸಂಪಾದಕಿಯಾಗಿ ಕೆಲಸ ಮಾಡಲು ಅವಕಾಶ ಸಿಕ್ಕಿದ್ದು ತುಂಬಾ ಸಂತೋಷವಾಗಿದೆ. ಈ ವರ್ಷ ನಮ್ಮ ಶಾಲೆಗೆ ಹೊಸದಾಗಿ ೩೨ ಮಕ್ಕಳು ಮತ್ತು ಇಬ್ಬರು ಶಿಕ್ಷಕಿಯರು ಸೇರ್ಪಡೆಯಾಗಿದ್ದಾರೆ. ನಮ್ಮ ಶಾಲೆಯ ಹತ್ತನೇ ತರಗತಿ ಮಕ್ಕಳು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಶಾಲೆಗೆ ಹೆಮ್ಮೆ ತಂದಿದೆ. ಎಲ್ಲರಿಗೂ ಇದೊಂದು ಹರ್ಷದಾಯಕ ಸಂಗತಿಯಾಗಿದೆ. ಮಕ್ಕಳು, ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು ಬೇಸಿಗೆ ರಜೆ ಮುಗಿಸಿ ಶಾಲೆಗೆ ಖುಷಿಯಿಂದ ಆಗಮಿಸಿದ್ದಾರೆ. 'ಅಂಗಳ' ಪತ್ರಿಕೆಗೆ ಲೇಖನಗಳನ್ನು ನೀಡಿದ ಮಕ್ಕಳಿಗೆ ಮತ್ತು ಶಿಕ್ಷಕಿಯರಿಗೆ ಧನ್ಯವಾದ ಹೇಳುತ್ತಾ, ಪತ್ರಿಕೆಯನ್ನು ನಿಮ್ಮ ಕೈಗಿಡುತ್ತಿದ್ದೇನೆ.



। ಸವಿತ ಬಿ. ಶಿಕ್ಷಕಿ,
ಸಂಚಿಕೆ ಸಂಪಾದಕಿ

## ಏಪ್ರಿಲ್–ಮೇನಲ್ಲಿ ಶಾಲೆಗೆ ಭೇಟಿ ಕೊಟ್ಟವರು

೧. ನಿಶಿತಾ, ಇಂಜಿನಿಯರ್
೨. ರೂಪ ರತನ್, ಶಿಕ್ಷಕಿ ಮೈಸೂರು
೩. ಶ್ರವಣಕುಮಾರ್, ಮೈಸೂರು
೪. ಶ್ರೀನಾಥ್, ಸ್ವಯಂ ಉದ್ಯೋಗಿ, ಬೆಂಗಳೂರು.
೫. ಸಂಗೀತ, ಸ್ಟಾಫ್ ನರ್ಸ್, ಕುಶಾಲನಗರ.

# ಖಾಲಿ ಇರದ ಮನಸಿನಲ್ಲಿ

ಖಾಲಿ ಇರದ
ಮನಸಿನಲ್ಲಿ
ಏನೇನೋ... ಗೀಚಿದ
ಗೆರೆಗಳು
ಅಡ್ಡಡ್ಡ... ಉದ್ದುದ್ದ
ಅಳಿಸಿ ಹೋದದ್ದು ಕೆಲವು
ಗುರುತಾಗಿ ಉಳಿದಿದ್ದು
ಹಲವು


ಕಾಲಚಕ್ರಕ್ಕೆ ಉರುಳುವ
ತವಕ
ವಿಧಿಯ ಕುದುರೆಗೆ
ಎಳೆಯುವುದು ಪುಳಕ
ಕುಂತರೂ... ನಿಂತರೂ
ಅತ್ತರೂ... ನಕ್ಕರೂ...
ಓಟ ನಿಲ್ಲಿಸುವುದಿಲ್ಲ ಬಂಡಿ.

ಓಡದೆ ಬಿಡದು...
ದಡ ಬಡ... ಬಂಡಿ..

–ಎಂ.ಮಂಜುಳಾ
ಮುಖ್ಯ ಶಿಕ್ಷಕಿ



# ಆಹಾ! ಸಿಂಗಾಪುರದ ಅನುಭವ



ನಾನು ಮತ್ತು ನನ್ನ ಕುಟುಂಬ ವಿಮಾನದಲ್ಲಿ ಸಿಂಗಾಪುರಕ್ಕೆ ಹೋಗಿದ್ದೆವು. ಸಿಂಗಾಪುರದ ಪಕ್ಕ ಸೆಂಟೋಸ್ ಐಲ್ಯಾಂಡ್ ಇದೆ. ಅಲ್ಲಿ ನಾನು ರೋಲರ್ ಕೋಸ್ಟಲ್‌ಗೆ ಹೋಗಿದ್ದೆ, ಅದು ತುಂಬಾ ಚೆನ್ನಾಗಿತ್ತು. ನಾವು ಸಿಂಗಾಪುರದಲ್ಲಿ ಮೃಗಾಲಯ, ಹಕ್ಕಿಗಳ ಉದ್ಯಾನವನ ಮತ್ತು ಅಕ್ವೇರಿಯಂಗೆ ಹೋಗಿದ್ದೆವು. ಆ ಮೃಗಾಲಯದಲ್ಲಿ ಪಾಂಡ, ಮೋನಿಟರ್ ಲಿಜ಼ರ್ಡ್, ಇಗ್ವಾನ, ಹುಲಿ, ಆನೆ, ಸಮುದ್ರ ಸಿಂಹ, ಹೈನಾ ಇತ್ಯಾದಿಗಳನ್ನು ನೋಡಿದೆವು. ಹಕ್ಕಿಗಳ ಉದ್ಯಾನವನದಲ್ಲಿ ಒಂದು ಶೋ ನಡೆದಿತ್ತು. ಅದರಲ್ಲಿ ಒಂದು ಹಕ್ಕಿ ಮಾತನಾಡುತ್ತಿತ್ತು. ಅದನ್ನು ನೋಡಿ ನನಗೆ ಖುಷಿಯಾಯಿತು.

ಅಕ್ವೇರಿಯಂನಲ್ಲಿ ನಾನು ದೊಡ್ಡ ಮತ್ತು ಚಿಕ್ಕ ಮೀನುಗಳನ್ನು ನೋಡಿದೆ. ಅದು ನನಗೆ ತುಂಬಾ ಇಷ್ಟವಾಯಿತು.



। ಆದ್ಯಂತ ದುರ್ಗ, ೪ನೇ ತರಗತಿ

# ಮುದ್ದು ಮೊಲ



ನನ್ನಯ
ಮೊಲವೆ
ಮುದ್ದು
ಮೊಲವೆ
ಬಾಬಾ ನನ್ನ
ಪುಟಾಣಿ
ಮೊಲವೆ
ನಿನ್ನ ಆಟ ಚೆಂದ
ನಿನ್ನ ಓಟ ಚೆಂದ
ನೀನು ಇರುವುದು ಮೃದು
ನಾನು ನಿನಗೆ ನೀರು ಕೊಡುವುದು
ಬಾವಿ ಸೇದು ಬಾವಿ ಸೇದು

–ಪ್ರಜ್ಞಾ ಎಂ.ಆರ್, ೫ನೇ ತರಗತಿ



# ಶಿಕ್ಷಕರಿಗೆ ಮಾರ್ಗದರ್ಶನ ನೀಡಿದ ಕಾರ್ಯಾಗಾರ

ನಮ್ಮ ಶಾಲೆಯಲ್ಲಿ ಪ್ರತಿ ವರ್ಷದ ಬೇಸಿಗೆ ರಜೆ ಅವಧಿಯಲ್ಲಿ ಶಿಕ್ಷಣ, ಕಲಿಕೆ, ಕಲಿಕಾ–ವಾತಾವರಣ ನಿರ್ಮಾಣ... ಇನ್ನಿತರ ವಿಷಯಗಳ ಕುರಿತು ಕಾರ್ಯಾಗಾರ ಆಯೋಜಿಸಲಾಗುತ್ತದೆ. ಈ ಕಾರ್ಯಾಗಾರಗಳಲ್ಲಿ ಶಿಕ್ಷಕರು ಮತ್ತು ಶಾಲೆಯ ಮುಖ್ಯಸ್ಥರು ಪಾಲ್ಗೊಳ್ಳುತ್ತಾರೆ. ಅಂತೆಯೆ, ಈ ವರ್ಷದ ಬೇಸಿಗೆ ರಜೆಯಲ್ಲಿಯೂ ಐದು ದಿನದ ಕಾರ್ಯಾಗಾರ ಆಯೋಜಿಸಲಾಗಿತ್ತು. ಅದರಲ್ಲಿ ಅರಿವು ಆಶಯಗಳು, ಮೌಲ್ಯಮಾಪನ, ಕಲಿಕಾ ಸಾಮರ್ಥ್ಯ, ಅಂತರ್ಶಿಸ್ತೀಯ ಕಲಿಕಾ ಪ್ರಕ್ರಿಯೆ ವಿಷಯಗಳು ಚರ್ಚಿಸಲ್ಪಟ್ಟವು.



**ಅರಿವು ಆಶಯಗಳು:** ಕಾರ್ಯಾಗಾರದ ಮೊದಲನೇ ದಿನ ತಲಾ ಇಬ್ಬರು ಶಿಕ್ಷಕರು ಗುಂಪು ಮಾಡಿಕೊಂಡು ಅರಿವು ಆಶಯಗಳಾದ ಪರಿಸರ, ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ, ಸ್ವಾವಲಂಬನೆಯ ಬದುಕು, ಆರೋಗ್ಯ ಮತ್ತು ನೈರ್ಮಲ್ಯ ಶಿಕ್ಷಣ, ಸಹಕಾರ ತತ್ವ ಕುರಿತು ಚರ್ಚಿಸಲಾಯಿತು. ಹೊಸ ಶಿಕ್ಷಕಿಯರಿಗೆ ನಮ್ಮ ಶಾಲೆಯ ಆಶಯಗಳ ಬಗ್ಗೆ ಸಂಪೂರ್ಣ ಚಿತ್ರಣ ದೊರಕಿತು. ಅಂತೆಯೆ, ನಾವು ಎದುರಿಸುತ್ತಿರುವ ಸಮಸ್ಯೆ, ಸವಾಲುಗಳ ಬಗ್ಗೆ ಮಾತುಕತೆ ನಡೆಸಿದೆವು.


**ಮೌಲ್ಯಮಾಪನ:** ಕಲಿಕೆ ಮತ್ತು ಮೌಲ್ಯಮಾಪನದ ಬಗ್ಗೆ ಶಾಲೆಯ ಟ್ರಸ್ಟಿಗಳಾದ ಸುದರ್ಶನ ಅವರ ನೇತೃತ್ವದಲ್ಲಿ ಚರ್ಚಿಸಿದೆವು. ಪರೀಕ್ಷೆ, ಅಂಕ, ಉತ್ತೀರ್ಣ ಮತ್ತು ಅನುತ್ತೀರ್ಣಕ್ಕೆ ಮೌಲ್ಯಮಾಪನ ಸೀಮಿತವಲ್ಲ. ಇದೊಂದು ಅವಿರತ ಪ್ರಕ್ರಿಯೆಯಾಗಿದ್ದು, ಮಕ್ಕಳ ಸರ್ವತೋಮುಖ ಪ್ರಗತಿಯ ಗುರಿ ಇಟ್ಟುಕೊಂಡಿದೆ. ಕಲಿಕೆಯ ಅಂತಿಮ ಫಲ ಮೌಲ್ಯಮಾಪನದಿಂದ ಮಾತ್ರ ತಿಳಿಯಲು ಸಾಧ್ಯ. ಮಕ್ಕಳ ಆಸಕ್ತಿ, ಕೌಶಲ್ಯ, ಭಾವನೆಗಳು, ವ್ಯಕ್ತಿತ್ವ ಹಾಗೂ ಹೊಂದಾಣಿಕೆಯನ್ನು ಮೌಲ್ಯಮಾಪನ ಒಳಗೊಂಡಿರಬೇಕು. ವೀಕ್ಷಣೆ, ಗೃಹಪಾಠ, ಆಟ, ತರಗತಿ ಚಟುವಟಿಕೆ, ಪರೀಕ್ಷೆ... ಇವುಗಳ ಮೂಲಕ ವಿದ್ಯಾರ್ಥಿಗಳ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಬೆಳವಣಿಗೆಯನ್ನು ಮಾಪನ ಮಾಡುವುದು. ಹೇಗೆ ಕಲಿಸುತ್ತೇವೆ, ಏನು ಕಲಿಸುತ್ತೇವೆ, ಏನನ್ನು ಕಲಿಯುತ್ತಿದ್ದಾರೆ ಎಂಬುದು. ಜ್ಞಾನದೊಂದಿಗೆ ಕಲಿಯುವುದು ಮತ್ತು ಕಲಿಸುವುದರ ಕಡೆಗೂ ಗಮನವಿರಬೇಕು. ಒಟ್ಟಿನಲ್ಲಿ ಮೌಲ್ಯಮಾಪನ ಮಗುವಿನ ಕಲಿಕೆಯ ಸಮಗ್ರ ವಿಕಾಸಕ್ಕೆ ಒಂದು ವ್ಯವಸ್ಥಿತ ಪ್ರಕ್ರಿಯೆ.

ಸಂಖ್ಯಾಶಾಸ್ತ್ರದ ಪ್ರಾಧ್ಯಾಪಕರೂ, ಸಂಗೀತ ಮತ್ತು ಸಾಮಾಜಿಕ ಅಧ್ಯಯನಗಳಲ್ಲಿ ಆಳವಾದ ಜ್ಞಾನ ಮತ್ತು ಒಲವುಳ್ಳವರೂ ಆದ ಟಿ.ಎಸ್ ವೇಣುಗೋಪಾಲ್ ಅವರೊಂದಿಗೆ ಎರಡು ಗಂಟೆಗಳ ಉಪಯುಕ್ತ ಮಾತುಕತೆ ನಡೆಯಿತು. ಶಿಕ್ಷಕರಾಗಿ ನಮ್ಮ ಚಿಂತನೆಗಳು, ನಂಬಿಕೆಗಳನ್ನು ಮರುಪರಿಶೀಲಿಸಲು, ಚಿಂತನೆಗೆ ಹಚ್ಚಲು ವೇಣುಗೋಪಾಲ್ ಅವರೊಂದಿಗೆ ಕಳೆದ ಸಮಯ ಅವಕಾಶ ಮಾಡಿಕೊಟ್ಟಿತು.

**ಅಂತರ್ಶಿಸ್ತೀಯ ಕಲಿಕೆ:** ಅಂತರ್ಶಿಸ್ತೀಯ ಕಲಿಕಾ ಪ್ರಕ್ರಿಯೆ ಕುರಿತು ಸಂಪನ್ಮೂಲ ವ್ಯಕ್ತಿ ಡಾ.ಗಣನಾಥ್ ಅವರೊಡನೆ ಚರ್ಚಿಸಲಾಯಿತು. ಇದರಿಂದ ನಮಗೆ, ಶಾಲೆಯಲ್ಲಿ ಮಕ್ಕಳಿಗೆ ನಾವು ಪರಿಚಯಿಸುವ ವಿಷಯಗಳೊಂದಿಗೆ ಇತರೆ ಯಾವ ವಿಷಯಗಳು ಸಂಬಂಧ ಹೊಂದಿರುತ್ತವೆ? ಅದನ್ನು ಯಾವ ವಿಷಯಗಳ ಜತೆ ಯೋಜಿಸಿಕೊಂಡರೆ ಸೂಕ್ತ ಎಂಬ ಸುಳಿವು ಸಿಕ್ಕಿತು. ಒಂದು ವಿಷಯವನ್ನು ಬೇರೆ ಬೇರೆ ಆಯಾಮ ಗಳೊಂದಿಗೆ ನೋಡಲು, ಯೋಚಿಸಲು ಈ ಕಾರ್ಯಾಗಾರ ಸಹಕಾರಿಯಾಯಿತು. ಸಂಪನ್ಮೂಲ ವ್ಯಕ್ತಿಗಳು ಶಿಕ್ಷಕರಿಗೆ ಕೆಲವು ಗುಂಪು ಚಟುವಟಿಕೆಗಳನ್ನು ಮಾಡಿಸಿದರು. ನಾವು ಯೋಚಿಸಿ–ಯೋಜಿಸಿಕೊಳ್ಳುತ್ತಿದ್ದ ಅಂತರ್ಶಿಸ್ತೀಯ ಕಲಿಕಾ ವಾತಾವರಣ ನಿರ್ಮಾಣಕ್ಕೆ ಒಂದು ಚೌಕಟ್ಟು ಹಾಕಿಕೊಳ್ಳುವಲ್ಲಿ ಕಾರ್ಯಾಗಾರ ಸಹಕಾರಿಯಾಯಿತು. । ಅರಿವು ಶಿಕ್ಷಕ/ ಶಿಕ್ಷಕಿಯರು

## ಜಾದು ವಿದ್ಯೆಯಿಂದ ಊಟ ಕೊಡಿಸುವೆಯಾ?

ಒಂದು ದಟ್ಟವಾದ ಕಾಡು ಇತ್ತು. ಆ ಕಾಡಿನ ಹತ್ತಿರ ಒಂದು ಗುಡಿಸಲು ಇತ್ತು. ಆ ಗುಡಿಸಲ ಒಳಗೆ ಪುಟ್ಟ ಹುಡುಗ ಇದ್ದನು. ಆದರೆ, ಅವನಿಗೆ ತಿನ್ನಲು ಏನೂ ಇರಲಿಲ್ಲ. ಅವನ ಗುಡಿಸಲ ಹತ್ತಿರ ಒಂದು ದಟ್ಟವಾದ ಬೆಟ್ಟ ಇತ್ತು. ಆ ಬೆಟ್ಟದಲ್ಲಿ ಒಂದು ಪಾರಿವಾಳವಿತ್ತು. ಆ ಪಾರಿವಾಳಕ್ಕೆ ಸಹಾಯ ಮಾಡುವ ಗುಣವಿತ್ತು. ಒಂದು ದಿನ ಆ ಹುಡುಗ ಕಾಡನ್ನೆಲ್ಲ ಸುತ್ತಿ ಬರಲು ಹೋದನು. ಅವನಿಗೆ ತುಂಬಾ ದಾಹ ಮತ್ತು ಹಸಿವು ಆಯಿತು. ಆಗ ಅವನು ಆ ಬೆಟ್ಟವನ್ನು ಕಂಡನು. ಅಲ್ಲಿ ಹಣ್ಣಿನ ಮರಗಳು ಇರುತ್ತವೆ ಎಂದುಕೊಂಡು ಆ ಬೆಟ್ಟ ಹತ್ತಿದನು. ಅಲ್ಲಿ ಅವನಿಗೆ ಪಾರಿವಾಳ ಕಾಣಿಸಿತು. ಅವನು ಆ ಪಾರಿವಾಳವನ್ನು ಕೇಳಿದ, 'ಇಲ್ಲಿ ಹಣ್ಣಿನ ಮರಗಳು ಇವೆಯೆ?' 'ಇಲ್ಲಿ ಯಾವ ಹಣ್ಣಿನ ಮರಗಳೂ ಇಲ್ಲ' ಎಂದು ಪಾರಿವಾಳ ಹೇಳಿತು. ಹಾಗಾದರೆ, ನಿನಗೆ ಹೇಗೆ ಊಟ ಸಿಗುತ್ತದೆ ಎಂದು ಕೇಳಿದನು. ನನಗೆ ನಮ್ಮ ರಾಜ ಊಟ ಕೊಡುತ್ತಾನೆ ಎಂದಿತು ಪಾರಿವಾಳ. 'ನಿಮ್ಮ ರಾಜನಿಗೆ ಊಟ ಹೇಗೆ ಸಿಗುತ್ತದೆ' ಹುಡುಗ ಕೇಳಿದನು. ಆಗ ಪಾರಿವಾಳ, 'ನಮ್ಮ ರಾಜನಿಗೆ ಜಾದು ಬರುತ್ತದೆ, ಅದರಿಂದ ನಮಗೆಲ್ಲ ಊಟ ಕೊಡುತ್ತಾನೆ' ಎಂದು ಹೇಳಿತು. ಆ ಹುಡುಗ ನನಗೂ ಸ್ವಲ್ಪ ಊಟ ಕೊಡಿಸು ಎಂದು ಕೇಳಿದನು. ಊಂ, ರಾಜನಿಗೆ ಹೇಳಿ ಊಟ ಕೊಡಿಸುತ್ತೇನೆ ಎಂದು ಹೇಳಿ ಪಾರಿವಾಳ ನಕ್ಕಿತು.





। ನಯ ಬಾಟ್ನಿ, ೩ನೇ ತರಗತಿ

## ಪುಟ್ಟ ಹೆಜ್ಜೆಯ ಆಗಮನ, ದಿಟ್ಟ ಹೆಜ್ಜೆಯ ನಿರ್ಗಮನ

**ಮೊದಲ ಪುಟದಿಂದ....**

ಎದುರಿಸುತ್ತಾರೆ? ಮುಖ್ಯವಾಹಿನಿಗೆ ಹೇಗೆ ಹೊಂದಿಕೊಳ್ಳುತ್ತಾರೆ? ಇತ್ಯಾದಿ ಪ್ರಶ್ನೆಗಳನ್ನು ಕೇಳುತ್ತಿದ್ದವರ ಸಂಖ್ಯೆಗೇನೂ ಕೊರತೆ ಇರಲಿಲ್ಲ. ಅಂತೆಯೆ, ಮಕ್ಕಳ ಒಳಿತಿಗಾಗಿ ವಿಭಿನ್ನ ಮಾರ್ಗದ ಶಿಕ್ಷಣ ಆರಂಭಿಸಿದ ಅರಿವು ಬಳಗಕ್ಕೆ ಎದುರಾದ ಸಮಸ್ಯೆ, ಆತಂಕ, ನೋವು ವಿಭಿನ್ನ. ಮೊದಲಿನಿಂದಲೂ ಜತೆಯಲ್ಲಿಯೇ ಇದ್ದ ಕೆಲವು ಮಕ್ಕಳು, ಶಿಕ್ಷಕರು ಮತ್ತು ಪೋಷಕರು ಒಂದು ಹಂತದಲ್ಲಿ ದೂರ ಸರಿದಾಗ ಅನುಭವಿಸಿದ ಸಂಕಟ, ಮಕ್ಕಳ ಮೇಲಾದ ಪರಿಣಾಮ, ತಂದ ಅನುಮಾನಗಳು ಬಹಳ. ಆ ಸಮಯದಲ್ಲಿ ಇತರ ಪೋಷಕರು, ಹಿತೈಷಿಗಳು ನೀಡಿದ ಬೆಂಬಲ, ಸಹಕಾರ ಮರೆಯುವಂತೆಯೇ ಇಲ್ಲ.

ಅವರ ಹಾರೈಕೆ ಅರಿವಿನ ಹಾದಿಯ ನಂಬಿಕೆಗಳನ್ನು ಇಮ್ಮಡಿಗೊಳಿಸಿತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶದ ದಿನ ಮಕ್ಕಳು ಫೋನಿನಲ್ಲಿ 'ಅಕ್ಕಾ ನನಗೆ ಇಷ್ಟು ಅಂಕ ಬಂದಿವೆ...' ಎಂದು ಹೇಳಿದಾಗ ಇವೆಲ್ಲವನ್ನೂ ಮೀರಿದ ಖುಷಿ... ಒಂದೆರೆಡು ಹನಿ ಕಣ್ಣೀರ ಧನ್ಯತಾಭಾವ... ಅಬ್ಬಾ! ನಮ್ಮ ಅರಿವಿನ ಮೊದಲ ತಂಡ ಮುಖ್ಯವಾಹಿನಿಯಲ್ಲಿ ಗೆದ್ದಿತು ಎಂಬ ಸಾರ್ಥಕ ಭಾವ ಉಂಟುಮಾಡಿತು.

ಅವರಂತೆಯೇ ಮುಂದಿನ ಮಕ್ಕಳೂ ಗೆದ್ದೇ ಗೆಲ್ಲುತ್ತಾರೆ ಎಂಬ ಆತ್ಮವಿಶ್ವಾಸ ಹೆಚ್ಚಿತು. ಅಂದು ಪುಟ್ಟ ಹೆಜ್ಜೆಯ ತೊದಲುಗಾಲಿನಲ್ಲಿ, ಅರಳುಗಣ್ಣಿನೊಂದಿಗೆ ಅರಿವು ಶಾಲೆಯ ಒಳಗೆ ಬಂದು, ಇಂದು ದಿಟ್ಟ ಹೆಜ್ಜೆಯೊಂದಿಗೆ ನವೀನ ಪರಿಸರಕ್ಕೆ ಹೊರಟ ಇವರಿಗೆ ಹೃದಯಪೂರ್ವಕ ಶುಭ ಹಾರೈಕೆಗಳು.

। ರಜನಿ ಜೆ., ಶಿಕ್ಷಕಿ

# South Canara Tour Experience


Myself, Kruthaswara, Srujana

In summer holidays I had been to Sulya (South Canara district). We went to my father's friend Sundar Kenaje uncle's house. They live in a farm house in Sulya. We went to their house by autorikshaw from bus stand. There I met my friends Kruthaswara and his younger brother Srujanadithyasheela. Krutha has interest in ants. He showed me some books about ants. Their house is different than other houses. There is a dog called "Ranga". It is very friendly dog. At about 3' o'clock we went behind their house. Krutha took me to their swimming pool like structure. It was not much big and also not that small! It was amazing. Krutha called me to swim along with him. His brother and with their cousins were also there. I told him that I had not bought my swimming costumes. But I went to swim because Sulya is almost near to Arabian sea. It was summer season also. So weather was very humid and hot. So I decided to swim and got inside the pool with regular shorts. We swam for about half an hour and decided to play volley ball inside the pool. While playing volley ball Abhinav(one who Krutha's cousin) said that "one minute I will throw!!!".

Myself, Srujan and Krutha played volley ball until our satisfaction. A funny incident happened there. Usually Myself and Krutha always use to talk in English. Abhinav was listening our conversation. I think he got bored with our conversation and he said "I will go, bye!".

Till 5 o clock we played cricket. After playing cricket Krutha asked me to make a funny short movie. But we didn't get any good scripts. Suddenly I thought a Suppandi joke. I was the camera man and editor. Others were actors, I gave roles to everybody. Our shooting got ended at 10 o'clock. Editing was finished at 10.30pm. Finally our short film got released and we got good response from everyone. That day was ended like that........


Next Morning we got towards Dharmasthala........

**-Preetham Raj,** Std.9th

# THRILL OF CUBING

In this article I will be telling you about cubing. How I started cubing was, on my friend's birthday my dad brought two 3x3x3 for my friend and me. Then my dad learnt to solve it. I found it interesting and wanted to learn. He taught me and I got super excited and then after a few weeks he ordered me a mirror cube. It was a 3x3x3 shape modification and I took about a week to learn to solve it. Then my dad's friend gifted me a mastermorphix and it was a pyramid and I took 3 years to learn to solve it.





It was 3x3x3 shape modification and then my teacher gifted me a snake cube. It took me a day to solve it. Then my dad brought me a set of Qiyi 2x2x2 3x3x3 4x4x4 5x5x5. I solved those and these are cubes but what about other shapes like a dodecahedron. Well, . such a twisty puzzle exists and it's called a megaminx. The whole series is like kilominx ,megaminx ,gigaminx ,terraminx and peta minx. To solve a cube there are algorithms like U R U' R'U'F' U F, U' L' U L U F U' F', F U R U'R'F', R U R' U R U U R', R' F R' B B R F' R' B B R R, F F U R' L F F L' R' U F F ', UW2 RW2 U2 r2 U2 RW2 UW2. The even numbered cubes have a special case called parity. It is an edge flipped over or two edges switching places. And last algorithm is the parity algorithm. For a cube to turn smoothly there are special oils called lubes. There are piece lubes and core lubes,for core lubes the cube needs to be taken apart and put back together. Then there is the spring tension. There is a screw inside every center cap. The screw's tension matters for the feel of a good cube. Hope you learnt something about cubing.

**-Angelo Andrade,** Std 6th

# Carnatic Classical Music Presentation

On 25th May 2019, we had a classical instrumental performance at our school. Vidwan Chandan kumar in flute,Vidan H.K.Narasimhamoorthy in Violin, Vidwan Ravishankar in Mridangam and Vidwan Giridhar Udupa in Ghatam. It was a very special day for me because I usually like instrumental performance. It was really enthusiastic to me to hear such a performance. Performance was more than my expectations. It was very pleasant while hearing. The first and my favourite kruti played was " Mahaganapatium' of raga "nata" as follows by Srigurugula of Shuddha kaveri, tambori meetidava of raga bhairavi...




Jugalbandi was very exciting that no one could beat anyone. It was inspiration for the youngsters to uplift our musical culture. I wish to have these type of musical programmers at our school. I thank Udupa Foundation and Arivu for organising this programme.

**-Megha S,** Std. 10th



# Gokarna Trip



During this summer holidays, I had been to Gokarna and Murudeshwara with my family. First, we went to Murudeshwara, there we saw Shiva temple, Ganapathi temple, beach and Shiva's big statue on the hill. Inside that statue, there is a museum about Ravana and how he got "Atmalinga" from Kailasa. In Shiva temple we were allowed to touch the god. Next we went to Gokarna beach, I played with Mythri. We had a lot of fun. We went for a ride in speed boat, they charged Rs.100 per person. After lunch our journey towards Sringeri started. On our way, we saw langoor monkeys. We reached Sringeri around 8pm. Next day we visited Sharada temple. We saw many big fishes in Tunga river, we fed them puri. Then we visited Sirimane falls near Sringeri, it was 15kms from there. That was a beautiful and safe place to play in water. I saw a snake near the falls. It was swimming in water. From Megha and Amogha, I learnt the name of the snake as "checkered keelback", which is not poisonous. On our way back to Mysore, we visited Jog falls, water was less, as it is summer season. Then we returned to Mysore.**-Sneha. G.** 6th standard.

